# ಟೀವಿ ಹಿಂದೆ ಪಾತ್ರ ಹುಡುಕುತ್ತಿದ್ದೆ...

**ಭವಿಷ್ ಪದ್ಮಾಜಯ**
**ಉದಯದ 'ಮದುಮಗಳು'**
**ಶಿಶಿರ್**

◆ **ನಿಮಗೆ ನಟನೆಯ ಪ್ಯಾಶನ್ ಹುಟ್ಟಿದ್ದು ಹೇಗೆ?**

ಸಿನಿಮಾ–ಸೀರಿಯಲ್ ಪ್ಯಾಶನ್ ಇರುವುದರಿಂದ ಬಣ್ಣವನ್ನು ಹಚ್ಚಿದ್ದೇನೆ. ಶಾಲಾ ದಿನಗಳಲ್ಲಿಯೇ ಈ ಮೋಹ ಹುಟ್ಟಿದೆ. ಎಂಟನೇ ತರಗತಿಯಲ್ಲಿ ಇದ್ದಾಗ ಸಿನಿಮಾ ನಟರ ಅಣಕು ಮಾಡುತ್ತಿದ್ದೆ. ಅದೇ ಸಮಯದಲ್ಲಿ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಪುಟ್ಟ ಕಥೆಯನ್ನು ಆಧರಿಸಿ ಸ್ಕಿಟ್ ಮಾಡಿದ್ದೆ. ಆ ಸ್ಕಿಟ್ ಈಗಲೂ ನೆನಪಿದೆ. ಅದೇನೆಂದರೆ 'ದಸರಾ ಅಂಬಾರಿ ಹೊತ್ತ ಆನೆ, ತೂಕ ತಡೆಯದೇ ನೆಲಹಿಡಿಯುತ್ತದೆ. ರಾಜ–ಮಂತ್ರಿ–ಮಾವುತ ಎಬ್ಬಿಸಿದರೂ ನೆಲ ಬಿಟ್ಟು ಏಳಲ್ಲ. ಆ ಆನೆಗೆ ಕನ್ನಡ ಸಿನಿಮಾ ಅಂದರೆ ಪಂಚಪ್ರಾಣ. ಹಾಗಾಗಿ ಕನ್ನಡ ಖ್ಯಾತ ನಟರನ್ನೆಲ್ಲ ಎಬ್ಬಿಸಲು ಕರೆಸಲಾಗುತ್ತದೆ. ದೊಡ್ಡ ದೊಡ್ಡ ನಟರು ಬಂದು ಎಬ್ಬಿಸಲು ಮನವಿ ಮಾಡುತ್ತಾರೆ. ಆದರೂ ಏಳಲ್ಲ. ಕೊನೆಗೆ ಎನ್.ಎಸ್. ರಾವ್ ತಮ್ಮ ಪ್ರಯತ್ನ ವಿಫಲ ಆಗಬಾರದು ಎಂದು ಕಿವಿಯಲ್ಲಿ ಗುಟ್ಟನ್ನು ಹೇಳುತ್ತಾರೆ. ಅದು ತಕ್ಷಣ ಎದ್ದು ಓಡುತ್ತದೆ. ಅಷ್ಟಕ್ಕೂ ಅವರು ಏನು ಹೇಳಿದ್ದರೆಂದರೆ ಕಿಲ ಕಿಲಕ್ಕಿಲ ವೀರಪ್ಪನ್ ಬಂದೂಕು ಹಿಡಿದುಕೊಂಡು ಹಿಂದೆ ಬರುತ್ತಿದ್ದಾನೆ ಎಂದಿದ್ದರು.' ಅದಾದ ಮೇಲೆ ಶಾಲೆಗಳಲ್ಲಿ ಯಾವುದೇ ಕಾರ್ಯಕ್ರಮ ಇದ್ದರೂ ನನಗೆ ಪ್ರಾಶಸ್ತ್ಯ ಸಿಗುತ್ತಿತ್ತು. 10ನೇ ತರಗತಿಯಲ್ಲಿ ಇದ್ದಾಗ ಬಿಳಿ ಪೇಪರ್ ಸಿಕ್ಕರೆ ಸಾಕು ಅದರಲ್ಲಿ ಕಥೆ ಬರೆಯುತ್ತಿದ್ದೆ.

◆ **ನಿಮ್ಮ ಹೆಸರು ವಿಶಿಷ್ಟವಾಗಿ ಇದೆಯಲ್ಲ, ಏನಿದು?**

ತಾಯಿ ಹೆಸರು ಪದ್ಮಾ, ತಂದೆ ಹೆಸರು ಜಯರಾಮ್. ಅವರಿಬ್ಬರ ಹೆಸರೂ ನನ್ನ ಜೊತೆ ಇರಲಿ ಎಂದು ನನ್ನ ಹೆಸರಿನ ಮುಂದೆ 'ಪದ್ಮಾಜಯ' ಸೇರಿಸಿಕೊಂಡಿದ್ದೇನೆ. ನಮ್ಮದು ರೈತ ಕುಟುಂಬ ನನ್ನ ತಂದೆ ಈಗ ಬಿಡದಿಯಲ್ಲಿ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ಅಮ್ಮ ಗೃಹಿಣಿ. ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಮಾದನಾಯಕನಹಳ್ಳಿ ನಮ್ಮೂರು. ಊರಲ್ಲೇ 10ನೇ ತರಗತಿಯ ತನಕ ಓದಿದ್ದೆ. ಕಾಲೇಜಿಗೆಂದು ಬೆಂಗಳೂರಿಗೆ ಬಂದೆ. ಸಿವಿಲ್ ಎಂಜಿನಿಯರಿಂಗ್ ಓದಿದೆ. ಈಗ ಬೆಂಗಳೂರಿನಲ್ಲಿ ಒಬ್ಬನೇ ಮನೆ ಮಾಡಿಕೊಂಡಿದ್ದೇನೆ. 2014ರಿಂದ ನಟನೆಯನ್ನು ಆರಂಭಿಸಿದ್ದೇನೆ. ಕಾಲೇಜು ರಂಗಭೂಮಿಯಿಂದ ಆರಂಭವಾಗಿ ಕೆಲವು ರಂಗ ತಂಡಗಳಲ್ಲಿ ತಿರುಗಾಟವನ್ನೂ ಮಾಡಿದ್ದೇನೆ. ನಂತರ ಸ್ಥಳೀಯ ಟೀವಿಗಳಲ್ಲಿ ಆ್ಯಂಕರ್ ಆಗಿ ಸೀರಿಯಲ್‌ಗೆ ಬಂದಿದ್ದೇನೆ. ಸಿನಿಮಾ ಒಂದರಲ್ಲಿ ನಟಿಸುತ್ತಿದ್ದೇನೆ.

◆ **ಶಿಶಿರ್ ಪಾತ್ರ ಸಿಕ್ಕಿದ್ದು ಹೇಗೆ?**

ಕಲರ್ಸ್‌ನಲ್ಲಿ 'ಹೂಮಳೆ' ಧಾರಾವಾಹಿ ಮಾಡ್ತಾ ಇದ್ದೆ. ಅದನ್ನು ನೋಡಿ 'ಮದುಮಗಳು' ತಂಡದಿಂದ ಫೋನ್ ಬಂತು. ಆ ಪಾತ್ರಕ್ಕೆ ನಾನೇ ಸೂಕ್ತ ಆಗಬಹುದು ಎಂದು ಕರೆದಿದ್ದರು. ಆಡಿಷನ್ ಕೊಟ್ಟೆ ತಿರಸ್ಕರಿಸಿದರು. ನನ್ನ ಗೆಟಪ್ ಹೊಸ ಧಾರಾವಾಹಿಗೆ ಸೂಟ್ ಆಗುವಂತೆ ಇರಲಿಲ್ಲ. ಸಾಮಾನ್ಯವಾಗಿ ಒಂದು ಪಾತ್ರಕ್ಕೆ ತಕ್ಕ ನಟನನ್ನೇ ಹುಡುಕುತ್ತಾರೆ. ತಿರಸ್ಕೃತ ಆದ ನನ್ನನ್ನೇ ಮತ್ತೆ ಆಡಿಷನ್‌ಗೆ ಕರೆದರು. ಅವರಿಗೆ ಬೇಕಾಗುವಂತೆ ನನ್ನ ಸ್ಟೈಲ್ ಬದಲಿಸಿದರು. ಕೊನೆಗೆ ಹೇಗೋ ಆಯ್ಕೆ ಮಾಡಿದರು. ಮತ್ತೊಂದು ವಿಚಿತ್ರ ಅಂದರೆ 2021ರಲ್ಲಿ ಈ ಪ್ರಾಜೆಕ್ಟ್ ಆರಂಭವಾಯಿತು. ಆದರೆ ಪ್ರಸಾರ ಆಗಿದ್ದು 2022ರಲ್ಲಿ. ಅನೇಕ ಹಿರಿಯ ಕಲಾವಿದರು ಈ ತಂಡದಲ್ಲಿ ಇದ್ದಾರೆ. ಚಿಕ್ಕವನಿದ್ದಾಗ ಇವರ ಸೀರಿಯಲ್ ನೋಡಿ ಖುಷಿ ಪಡ್ತಿದ್ದೆ. ಈಗ ಅವರ ಜೊತೆ ನಟಿಸುತ್ತಿದ್ದೇನೆ. ನಾನು ಚಿಕ್ಕಹುಡುಗ ಇದ್ದಾಗ ಟೀವಿ ಹಿಂದೆ ಹೋಗಿ ಪಾತ್ರಗಳನ್ನು ಹುಡುಕುತ್ತಿದ್ದೆ. ಈಗ ನಾನೇ ಪರದೆಯಲ್ಲಿ ಕಾಣುತ್ತಿದ್ದೇನೆ.

◆ **ಅನಿಶ್ಚಿತ ವೃತ್ತಿ ಬಗ್ಗೆ ಹೇಳುವುದಾದರೆ.**

ಒಂದು ಪಾತ್ರದ ನಂತರ ಮತ್ತೊಂದು ಪಾತ್ರ ಸಿಗುವ ಹೊತ್ತಿಗೆ ಒಂದಿಷ್ಟು ಸಮಯ ಹಿಡಿಯುತ್ತದೆ. ಆಗ ಸಿಕ್ಕಾಪಟ್ಟೆ ಬೇಜಾರಾಗುತ್ತದೆ. ಸೀರಿಯಲ್ ಮಾಡುವ ಮುಂಚೆಯಿಂದ ಒಂದು ಮನೆಯಲ್ಲಿದ್ದೆ. ಆಗ ಯಾರೂ ಮಾತನಾಡಿಸುತ್ತಿರಲಿಲ್ಲ. ಸೀರಿಯಲ್ ಶುರುವಾಗಿ 2 ತಿಂಗಳು ಆಯ್ತು. ನೆರೆಮನೆಯವರು ಒಂದು ದಿನ ಬೌಲ್‌ನಲ್ಲಿ ಪ್ರಸಾದ ಕೊಟ್ಟರು. ಸೀರಿಯಲ್ ಮುಗಿಯಿತು. ಸ್ವಲ್ಪ ಗ್ಯಾಪ್ ಆಯಿತು. ಏನಾಯ್ತು ಪ್ರಾಜೆಕ್ಟ್ ಎಂದು ಆಗಾಗ ಅವರು ಕೇಳುತ್ತಿದ್ದರು. ಇನ್ನೇನು ಶುರುವಾಗಬೇಕಿದೆ ಎನ್ನುತ್ತಿದ್ದೆ. ಸ್ವಲ್ಪ ದಿನದ ನಂತರ 'ಭವಿಷ್ ಪ್ರಸಾದ ಕೊಟ್ಟಿದ್ನೆಲ್ಲ ಆ ಬಟ್ಟಲು ಕೊಡ್ತೀರಾ?' ಎಂದು ಕೇಳಿದರು. ಪ್ರಸಾದ ಕೊಟ್ಟ ತಕ್ಷಣ ನಾನು ತುಂಬ ಖುಷಿಪಟ್ಟಿದ್ದೆ. ಏಕೆಂದರೆ ಇನ್ನೇನೂ ಆಗಾಗ ತಿಂಡಿ ಊಟವನ್ನೂ ಕೊಡ್ತಾರೆ. ನಾನು ಕೈ ಸುಟ್ಟುಕೊಂಡು ಅಡುಗೆ ಮಾಡುವುದು ತಪ್ಪುತ್ತದೆ ಎಂದು ಭಾವಿಸಿದ್ದೆ. ಕೆಲಸ ಇದ್ದರೆ ಅಷ್ಟೇ ಬೆಲೆ ಎನ್ನುವುದು ಗೊತ್ತಾಯಿತು. ಇಂತಹದ್ದೆಲ್ಲ ಅನೇಕ ಅನುಭವಿಸುತ್ತೇವೆ.

◆ **ವಿನೋದ ಮನೋಭಾವದ ನೀವು ಹಾಸ್ಯ ಪಾತ್ರಕ್ಕೇಕೆ ಒಗ್ಗುತ್ತಿಲ್ಲ?**

ಸ್ವಭಾವತಃ ನನ್ನ ಮಾತಿನಲ್ಲಿ ತಮಾಷೆ ಹೊರಹೊಮ್ಮುತ್ತದೆ. ನನ್ನ ಕಾಮಿಡಿ ಪ್ರಜ್ಞೆ ಎಷ್ಟು ವರದಾನವಾಗಿದೆ ಎಂದರೆ, ಸೆಟ್‌ನಲ್ಲಿ ಯಾರಾದರೂ ಜಗಳ ಮಾಡುತ್ತಿದ್ದರೆ. ಆ ಪರಿಸ್ಥಿತಿಯನ್ನು ಐದೇ ನಿಮಿಷದಲ್ಲಿ ತಿಳಿಗೊಳಿಸುತ್ತೇನೆ. ಆದರೆ ನೋಡಲು ನಾನು ಹಾಸ್ಯ ಕಲಾವಿದನಂತೆ ಕಾಣಿಸುವುದಿಲ್ಲ. ಹಾಗಾಗಿ ಲವರ್‌ಬಾಯ್ ಪಾತ್ರಗಳನ್ನೇ ಕೊಡುತ್ತಾರೆ. ಅಂತಹ ಪಾತ್ರಗಳಿಗೆ ನಾನು ಸೂಕ್ತ ಎಂದು ಭಾವಿಸಿದ್ದಾರೆ. ಅದಕ್ಕೆ ಸೂಟ್ ಆಗುತ್ತೇನೆ. ವೃತ್ತಿ ಜೀವನದಲ್ಲಿ ಇದು ಒಂದು ಕೆಲಸ ಎಂದು ಮಾಡುತ್ತಿದ್ದೇನೆ. ಯಾವ ಪಾತ್ರವಾದರೂ ಸೈ. ಎಂಜಿನಿಯರಿಂಗ್ ಮುಗಿಸಿದ್ದರೂ ಇದುವರೆಗೂ ನಾನು ನನ್ನ ಅಂಕಪಟ್ಟಿಯನ್ನೇ ಕಾಲೇಜಿಗೆ ಹೋಗಿ ತಂದಿಲ್ಲ. ಏಕೆಂದರೆ ಮನೆಯವರ ಖುಷಿಗಾಗಿ ಓದಿದ್ದೆ. ಈಗ ನನ್ನ ಖುಷಿಗಾಗಿ ಕೆಲಸ ಮಾಡುತ್ತಿದ್ದೇನೆ. ಇದು ಎಲ್ಲರಿಗೂ ಮಾಡಲು ಆಗುವ ಕೆಲಸ ಅಲ್ಲ. ಎಲ್ಲಿವರೆಗೂ ಸಾಧ್ಯವೋ ಅಲ್ಲಿಯ ತನಕ ಇರ್ತೀನಿ.



■ **ರಾಘವೇಂದ್ರ ಕೆ.**